**OS No**: 44/2021 **P.W**:1

**ದಿನಾಂಕ : 23.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ವಾದಿಯ ಪರ ಶ್ರೀ ಎಂ.ಈ.ಎಸ್. ವಕೀಲರಿಂದಃ-**

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ, ದಾಖಲಾತಿಗಳನ್ನು ಈ ಕೆಳಕಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

8 ಎಲ್.ಐ.ಸಿ. ಬಾಂಡ್‌ಗಳನ್ನು ಕ್ರಮವಾಗಿ ನಿ.ಪಿ. 3 ರಿಂದ 10 ಎಂದು ಗುರುತಿಸಲಾಯಿತು.

**ಪಾಟೀಸವಾಲು 6 ಮತ್ತು 7 ನೇ ಪ್ರತಿವಾದಿಗಳ ಪರ ಶ್ರೀ. ಎ.ಎಸ್. ವಕೀಲರಿಂದ :-**

ನಿ.ಪಿ. 8 ಪಾಲಿಸಿಯ ಪ್ರಿಮಿಯಂ ಅನ್ನು 3 ವರ್ಷ ಪಾವತಿಸಿರುವುದಿಲ್ಲ ಹೀಗಾಗಿ ಸದರಿ ಪಾಲಿಸಿಯು ಲ್ಯಾಪ್ಸ್ ಆಗಿರುತ್ತದೆ ಎಂದರೆ ಸಾಕ್ಷಿ ನನ್ನ ಮಗನಿಗೆ ಹುಷಾರು ತಪ್ಪಿದ ಕಾರಣ ಪ್ರಿಮೀಯಂ ಪಾವತಿಸಲು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತಾರೆ. ಉಳಿದ ಪಾಲಿಸಿಗೆ ಸಂಬಂಧಫಟ್ಟಂತೆ ಸಹಾ ಆಗಸ್ಟ್ 2020 ರಿಂದ ಈಚೆಗೆ ಯಾವುದೇ ಪ್ರೀಮಿಯಂ ಅನ್ನು ಕಟ್ಟಿರುವುದಿಲ್ಲ ಎಂದರೆ ಸರಿ. ನಾನು ಪಾಲಿಸಿಯ ಪ್ರೀಮಿಯಂಗಳನ್ನು ಸರಿಯಾಗಿ ಪಾವತಿ ಮಾಡದೇ ಇರುವುದರಿಂದ ಪಾಲಿಸಿಯ ಲಾಭಗಳಿಗೆ ಅರ್ಹಳಾಗಿಲ್ಲ ಎಂದರೆ ಸರಿಯಲ್ಲ.

ಉಳಿದ ಪ್ರತಿವಾದಿಗಳನ್ನು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಯಿತು. ಶ್ರೀ. ಬಿ.ಎನ್.ಆರ್. ವಕೀಲರು ಹಾಜರಿದ್ದು, ತಮ್ಮ ಪರವಾಗಿ ಯಾವುದೇ ಪಾಟೀಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳ ಗೈರು ಹಾಜರಾತಿಯ ಮೇರೆಗೆ ಅವರ ಪರ ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.